ಕೇಂದ್ರ ಸರ್ಕಾರದವರು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ಎಲ್ಲಾ ಅಂಗವಿಕಲರ ಪುನರ್ವಸತಿ ಕೈಗೊಂಡಿರುವ ಬಗ್ಗೆ.

1221 ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ):- ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದವರು ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ಎಲ್ಲಾ ಅಂಗವಿಕಲರ ಪುನರ್ವಸತಿ ಕೈಗೊಂಡಿದ್ದಾರೆಯೆ?

ಆ) ಅಂತಹ ಯೋಜನೆಗಳನ್ನು ರಾಜ್ಯ ಸರ್ಕಾರದವರು ಸಹ ಕೈಗೊಳ್ಳಲು ಇರುವ ತೊಂದರೆಯೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು):-

ಅ) ಹೌದು, ಮೈಸೂರಿನ ಜಿಲ್ಲಾ ಪುನರ್ವಸತಿ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಆ) ಜಿಲ್ಲಾ ಪುನರ್ವಸತಿ ಯೋಜನೆ, ಸರ್ವ ಅಂಗವಿಕಲರ ಸಮಗ್ರ ಪುನರ್ವಸತಿಗಾಗಿ ಭಾರತ ಸರ್ಕಾರ ಅಂತರ್‌ರಾಷ್ಟ್ರೀಯ ನೆರವಿನಿಂದ ಕೈಗೊಂಡ ಬೃಹತ್ ಯೋಜನೆ. ಆರ್ಥಿಕ ತೊಂದರೆಗಳ ಕಾರಣ ರಾಜ್ಯ ಸರ್ಕಾರವು ಇಂತಹ ಯೋಜನೆಗಳನ್ನು ಕೈಗೊಳ್ಳಲು ಯೋಚಿಸಿರುವುದಿಲ್ಲ.

ವಿದ್ಯುತ್ ಒದಗಿಸುವುದು ಮತ್ತು ಉಪ ವಿದ್ಯುತ್ ಉಪಕೇಂದ್ರದ ಬಗ್ಗೆ.

1699 ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಕೈಗಾರಿಕೆ ಮತ್ತು ವಕ್ಫ್ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಾಗ್ಯಜ್ಯೋತಿ ಯೋಜನೆಯನ್ನು ಮುಂದುವರಿಸಲು ಏನಾದರು ಉದ್ದೇಶವಿದೆಯೇ, ಹಾಗಿದ್ದರೆ ಯಾವಾಗ ಪ್ರಾರಂಭ ಮಾಡಲಾಗುವುದು?

ಆ) ಚನ್ನಪಟ್ಟಣ ತಾಲ್ಲೂಕಿನ ಮೊಳೆ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಏನಾದರೂ ಉದ್ದೇಶವಿದೆಯೇ ಹಾಗಿದ್ದರೆ ಯಾವಾಗ ಪ್ರಾರಂಭಮಾಡಲಾಗುವುದು?

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಒದಗಿಸುವ ಬಗ್ಗೆ ಎಷ್ಟು ಅರ್ಜಿಗಳು ಸರ್ಕಾರದಲ್ಲಿ ಬಾಕಿ ಉಳಿದಿದೆ. ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುವುದು?

ಈ) ವಿದ್ಯುತ್ ಕಂಬ, ತಂತಿಗಳು ಇತ್ಯಾದಿ ಸಾಮಗ್ರಿಗಳ ಕೊರತೆ ಇದೆ, ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗು ವಕ್ಫ್ ಸಚಿವರು.)

ಅ) ಭಾಗ್ಯಜ್ಯೋತಿ ಯೋಜನೆಯು 1979-80ರಲ್ಲಿ ಪ್ರಾರಂಭವಾದಾಗಿನಿಂದ ನಿರಂತರವಾಗಿ ಜಾರಿಯಲ್ಲಿದೆ.

ಆ) ಚನ್ನಪಟ್ಟಣ ತಾಲ್ಲೂಕಿನ ಆಕ್ಕೂರ ಮೋಳೆ ಗ್ರಾಮದಲ್ಲಿ ಒಂದು 6.3 ಎಂ.ವಿ.ಎ. ಸಾಮರ್ಥ್ಯ 66 -11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ವಿದ್ಯುತ್